ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ಥಿತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ನಂಬರ್ ಅಥವಾ ವಿಸ್ತೀರ್ಣ ಹೆಸರು.	ಜಮೀನು. ಖುಷ್ಕಿ ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ. ಎಕರೆ.	ಜಮೀನು. ವಿಸ್ತೀರ್ಣ. ಗುಂಟೆ.	ಜಮೀನು. ಅಕಾರ. ರೂ.	ಜಮೀನು. ಅಕಾರ. ಆ.	ಜಮೀನು. ಅಕಾರ. ಪೈ.	ಸರ್ಕಾರಕ್ಕೆ ಬರಬೇಕಾದ ಸೋಪಸ್ ಸಹಿತವಾದ ಬಾಕಿ ಹೊಬಲುಗ. ರೂ.	ಆ.	ಪೈ.
1	2	3	4	5	6	7	8	9		10			11		
ಕೃಷ್ಣರಾಜನಗರ	ಹೆಬ್ಬಳ್ಳಿ ಅಕ್ಕಿ	ಸರ್ವಜ್ಞನಗರ ದಪಶದಪಲ್ಲಿ	ಜಕಂದ್ರಕೇಖರ ಶಾಸ್ತ್ರಿ ಬಿನ್ ಶ್ರೀಕಂಠಶಾಸ್ತ್ರಿ	..	ರೂ. ..	ಆ. ..	ಪೈ. .	ಸೈನ್ಯರ ಆನಾಂ ಹೊರಪಡಿನ ಪೂರು ಗ್ರಾಮದ	ಖುಷ್ಕಿ ತರೀ ಪರಂಪೋಕು ತರೀ ಬಾಗಾಯತು	67 24 74 13 180 34 10 22	333 13	1273	0	0	658	0	9

ಹರಾಜು ತಾರೀಖು ವರಿಗೆ ಬಡ್ಡಿ ಬರಬೇಕು.

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಪಿ. ಪಂಚನಾಥರಾವ್,
ಸಬ್ ಡಿವಿಜ್ ಆಫಿಸರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ ೧೮೯೫—೯೬ನೇ ಇಸವಿ ಅರ್ಜೀ ನಂಬರ್ 469.

ಮೃತಪಟ್ಟ ನಲ್ಲೂರು ರಂಗರಾಯರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ನಲ್ಲೂರು ನಾರಾಯಣರಾಯರು, ಮೃತಪಟ್ಟ ಸದರೀ ರಂಗರಾಯರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಸನದ ಸ್ಥಳದ ಸದರೀ ನಾರಾಯಣರಾಯರು, ಸದರೀ ವಾಸಸ್ಥರಾಗಿ ಮೃತಪಟ್ಟ ರಂಗರಾಯರವರ ಜಿಂದಗಿ ಬಗ್ಯಾಗಿ ಬರತಕ್ಕ 10,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣರಾಯರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಜುಲೈ ತಿಂಗಳ ತಾರೀಖು 6ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಜೂನ್ ತಿಂಗಳ 16ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಇ ಸ್ಟ್ ಹಾ ರ್ ನಾ ಮೆ .

ತಾರೀಖು 5ನೇ ಜೂನ್ 1896ನೇ ಇಸವಿ.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಈ ಕೆಳಗೆ ನಮೂದಿಸುವ ಸಂದಲ್ ಕೋಠಿಗಳಿಗೆ ಅವುಗಳ ಬಾಜೂದಲ್ಲಿ ಕಾಣಿಸಿರುವ ತಾಲ್ಲೂಕಿನ ಹೋಬಳಿಗಳಿಂದ ವಣ ಸಂದಲ್ ಮರಗಳು ಮತ್ತು ಹೊಂಭಸಿ ಎಂದು ಕರಿಯಲ್ಪಡುವ ಪ್ಲೀಣ ಹೊಂದುತ್ತಾ ಇರುವ ಬಲಿತ ಸಂದಲ್ ಮರಗಳು, ಮತ್ತು ನೆಲದಲ್ಲಿ ಬಿಟ್ಟು ಇರುವ ಬೇರುಗಳು, ಬೇರು ಸಹಿತ ಕೀಳಿಸಿ ಬೀ ಮರ ಕಾಮುಗಾರಿಯಿಂದ 1896ನೇ ಇಸವಿ ಅಕ್ಟೋಬರು 31ನೇ ತಾರೀಖಿನೊಳಗೆ ಕೋಠಿಗೆ ರವಾನಿಸಿ ಕೊಡುವದಕ್ಕೆ ಕಂಟ್ರಾಕ್ಟು ದರಖಾಸ್ತುಗಳು ಅಂಗೀಕರಿಸಲ್ಪಡುತ್ತೆ.

ನಂಬರು.	ಕೋಠೀಹೆಸರು.	ಜಮಾಯಿಸುವ ವೊತ್ತ.	ಹೋಬಳಿ ಹೆಸರು.	ತಾಲ್ಲೂಕು ಹೆಸರು.
1	ಶಿವಮೊಗ್ಗ	30 ಟ೯.	ಆಗರದಹಳ್ಳಿ ತರಫ಼ ಹೊಳಲೂರು	ಶಿವಮೊಗ್ಗ
		20 ,,	ಹೊಳೇಹೊನ್ನೂರು	ಡಿಟೋ
		25 ,,	ಚನ್ನಗಿರಿ	ಚನ್ನಗಿರಿ
		25 ,,	ವುಬ್ರಾಣಿ	ಡಿಟೋ
2	ಸಾಗರ	25 ,,	ಅನಂತವುರ	ಸಾಗರ
3	ತೀರ್ಥಹಳ್ಳಿ	25 ,,	ಆರಗ	ತೀರ್ಥಹಳ್ಳಿ
		25 ,,	ಆಗ್ರಹಾರ	ಡಿಟೋ
		25 ,,	ಹುಮಚ	ನಗರ
		200		

2. ಎಲ್ಲಾ ಟೆಂಡರುಗಳ ವೇಲೂ ಇಂಥಾ ಸಂದಲ್ ಕೋಠಿಗೆ ವಣ ಮತ್ತು ಹೊಂಭೇ ಸಂದಲ್ ಜಮಾಯಿಸುವ ಬಗ್ಯೆ ಟೆಂಡೆರ್ಎಂದು ಬರಿಯತಕ್ಕದ್ದು. ಮತ್ತು ಟೆಂಡರ್ ಸಂಗಡ ಕೋಠಿ ಬಂದಕ್ಕೆ 50 ರೂಪಾಯಿನಂತೆ ಕರ್ಣಸೀ ನೋಟು ಮೂಲಕ ಠೇವಣಿ ಹಾಜರ್ಮಾಡತಕ್ಕದ್ದು. ಅಂಗೀಕರಿಸದೇ ಇದ್ದ ಟೆಂಡರಿನ ಸಂಗಡ ವೊಬಲಗು ವಾಪಸು ಮಾಡಲ್ಪಡುವದು.

3. ಟೆಂಡರುಗಳು ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಹೆಸರಿನಲ್ಲಿ ಬರಿಯತಕ್ಕದ್ದು. 1896ನೇ ಇಸವಿ ಜುಲೈ 15ನೇ ತಾರೀಖು ದಿವಿ 12 ಘಂಟೆವರಿಗೂ ಸದರೀ ಟೆಂಡರುಗಳು ಅಂಗೀಕರಿಸಲ್ಪಡುವವು.

4. ಪ್ರತಿಯೊಬ್ಬ ದರಖಾಸ್ತುದಾರನೂ ಈ ಕೆಳಗೆ ನಮೂದಿಸುವ ತಪಸೀಲಿನಂತೆ ವಣ ಮತ್ತು ಹೊಂಭೇ ಸಂದಲು ಮರಗಳ ಜಡ ಸಹಿತ ಕೀಳಿಸಿ ಬಿಳೀ ಮರ ಕಾವುಗಾರಿಯಿಂದ ಕೋಠಿಗೆಪ್ರತಿಯೊಂದು ಹೋಬಳಿ ಯಿಂದ ರವಾನಿಸುವದಕ್ಕೆ ಟ೯ ಬಂದಕ್ಕೆ ಅಖ್ತೈರ್ ದರ ನಮೂದಿಸತಕ್ಕದ್ದು.

(1). ಬಣಗಿರುವ ಸಂದಲ್ ಮರಗಳು ಮತ್ತು ನೆಲದಲ್ಲಿ ಬಿಟ್ಟ ಹಳೇ ಜಡಗಳು ಜಮಾವಣಿ ಬಗ್ಯೆ.

(2). ಕ್ಷೀಣ ಹೊಂದುತ್ತಾ ಇರುವ ಸುಮಾರು ಅರ್ಧಭಾಗದವರಿವಿಗೂ ವಣಗಿರುವ ಹೊಂಭೇ ಎಂದು ಕರಿಯಲ್ಪಡುವ ಬಲಿತಸಂದಲ್ ಮರಗಳೂ.

(5). ಕಂಟ್ರಾಕ್ಟುದಾರನು ಲೆಖ್ಕಕ್ಕೆ ತರಲ್ಪಟ್ಟ ತೇದಾದಿನ ವೇಲೆ ಆರವಾಶಿ ವಗ್ಯೆರೆ ಭರ್ತಿಗಾಗಿ ಟ೯ ಬಂದಕ್ಕೆ ಎರಡು ಹಂಡ್ರಡವೇಟು ಅಂದರೆ ಕೇಕಡಾ 10 ರಂತೆ ಹೆಚ್ಚು ತೂಕವನ್ನು ಕೊಡಲು ಬದ್ಧನಾಗಿರತಕ್ಕದ್ದು.

6. ಸಂದಲ್ ಮರಗಳ ಚುನಾಯಿಸೋಣ, ಕೀಳುವಿಕ್ಕೆ, ಬರಟು ಕೆತ್ತನೆ, ಮತ್ತು ಅದೇ ವಿಷಯಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರು ಮಾಡುವ ರೂಲ್ಸು ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧನಾಗಿರ ತಕ್ಕದ್ದು.

7. ಒಂದು ಅಂಗುಲಕ್ಕಿಂತ ಜಾಸ್ತಿಯಾಗಿ ಜೇಗುವುಳ್ಳ ಶಿಪ್ಪೆ ತಲೆಗಳು ಜಂಗಲುಗಳಲ್ಲಿ ಬಿಡಕೂಡದು. ವರಟು ಕೆತ್ತನೆ ಮಾಡದೆ ಹಾಗೆಯೇ ಕೋಠಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಛಾರ್ಜು ಮಾತ್ರ ಪಾವತಿ ಮಾಡ ಲ್ಪಡುತ್ತೆ. ಬುಳಣಿ ಮತ್ತು ಜೇಗು ಇರತಕ್ಕ ಜಕ್ಕೆ, ಮರಗಳ ಜೊತೆಯಲ್ಲಿಯೇ ಸಾಗಿಸಲ್ಪಡಬೇಕು.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರು ಪ್ರತಿ ಮಾಹೆಯಲ್ಲೂ ಎಷ್ಟು ವೊತ್ತ ತಯಾರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕಮಾಡುತ್ತಾರೋ ಅಷ್ಟು ವೊತ್ತವನ್ನು ಖಂಡಿತವಾಗಿ ಕೋಠಿಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಿಂದ ವೊಕರೂರ್ಮಾಡಲ್ಪಡುವ ಪೆನಾಲ್ಟಿಗೆ ಗುರಿಯಾಗತಕ್ಕದ್ದು.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಟೆಂಡರ್ ಅಂಗೀಕರಿಸಿದ ವರ್ತಮಾನವನ್ನು ತಿಳಿದ ಒಂದು ವಾರದೊಳಗಾಗಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡಬೇಕಲ್ಲದೆ ತನ್ನ ಕಂಟ್ರಾಕ್ಟು ಸರಿಯಾಗಿ ಪೂರೈಸಿಕೊಡುವದಕ್ಕೆ ಖಾತರಿಗಾಗಿ ಪುನಹ 100 ಒಂದು ನೂರು ರೂಪಾಯಿ ಠೇವಣೀ ಇಡತಕ್ಕದ್ದು. ಕಂಟ್ರಾಕ್ಟಿನ ಷರತ್ತಿನಲ್ಲಿ ಯಾವದನ್ನಾ ದರೂ ತಪ್ಪಿದರೆ ಠೇವಣೀ ವೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

10. ಕಮ್ಮಿ ದರದ ಟೆಂಡರ್ ಆಗಲಿ ಯಾ ಮತ್ತಾವ ಟೆಂಡರೇ ಆಗಲಿ ತಿರಸ್ಕರಿಸುವದಕ್ಕೆ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರು ಸ್ವತಂತ್ರರಾಗಿರುತ್ತಾರೆ. ಮತ್ತು ಅಂಥಾ ಅಂಗೀಕರಿಸಲ್ಪಡುವ ಟೆಂಡರುಗಳು ಡೆಪ್ಯುಟಿ ಕಮ್ಮಿಷ್ನರ ಸಾಹೇಬರವರ ಒಪ್ಪಿಗೆಯಿಂದ ಫಾರೆಸ್ಟು ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಬಳಪಟ್ಟಿರತಕ್ಕದ್ದು.

11. ಸಂದಲನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ವಿಷಯಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರ್ಕಾರದವರು ರಸ್ತೆಯನ್ನಾಗಲಿ ಭಂಡೀದಾರಿಯನ್ನಾಗಲಿ ಮಾಡಿಸಿಕೊಡುವದಕ್ಕೆ ಬದ್ದರಾಗಿರುವದಿಲ್ಲ. ಮತ್ತು ಈ ನೆಪದಿಂದ ಸಂದಲ್ ವಾಯಿದೆಯಲ್ಲಿ ತಾರದೆಯಿದ್ದರೆ, ಯಾವ ಕಾರಣವೂ ಅಂಗೀಕರಿಸಲ್ಪಡಲಾರದು.

12. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಕಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಕೇಳತಕ್ಕದ್ದು. ಮತ್ತು ಅಲ್ಲಿ ನೋಟಿಸ್ ಬೋರ್ಡಿನ ಮೇಲೆ ಇಸ್ತಿಹಾರುನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್,
ಮೈಸೂರ್.

ನಗರ ಡಿವಿಜ್ಞ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

ಸ೯ 1895—96ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 332.

ಮೃತಪಟ್ಟ ಶಿಲೆಮಾನುಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಅಬ್ದುಲ್ ರಸೂಲುಸಾಬಿ ಬಿ೯ ಶಿಲೆಮ್ಮಾಸಾಬ್, ಚಿಕ್ಕಮಗಳೂರು ವಾಸಿ. ಮೃತಪಟ್ಟ ಸದರಿ ಶಿಲೆಮ್ಮಾಸಾಬರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ಸ್ಥಳದ ಅಬ್ದುಲ್ ರಸೂಲುಸಾಬರು, ಚಿಕ್ಕಮಗಳೂರು ವಾಸಸ್ಥರಾಗಿ ಮೃತಪಟ್ಟ ಶಿಲೆಮ್ಮಾಸಾಬರ ಜಿಂದಗಿ ಬಗ್ಯಾಗಿ ಬರತಕ್ಕ ಚಿಕ್ಕಮಗಳೂರು ಮುನಸಿಫ್ ಕೋರ್ಟ್ 1894ನೇ ಇಸವಿ ಜಾರಿ ನಂಬರ್ 69ರಲ್ಲಿ ಬರಬೇಕಾದ 72—8—0 ರೂ. ಸಾಲವನ್ನು ವಸೂಲ್ ಮಾಡುವದಕ್ಕೆ ಸ೯1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ರಖಾಸ್ತುದಾರರಾದ ಅಬ್ದುಲ್ ರಸೂಲ್‌ಸಾಬರ ಅರ್ಜಿಯನ್ನು ಸ೯ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 28ರಲ್ಲು. ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿಲೆಮ್ಮಾಸಾಬರ ಆಸ್ತಿಗೆ ಹಕ್ಕುದಾರರಾದ ವಿಷಯ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯುಪಡಿಸಿ ಇಧೆ.

ಸ೯ 1896ನೇ ಇಸವಿ ಜೂ೯ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟ್ ನೊಹರ್‌ನಿಸಿ ನನ್ನ ದಸ್ತಖತ್ತಿನೊಡನೆ ಕೊಡೋಣಾಗಿಧೆ.

ಬಿ. ತಿರುಮಾಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ.

Mysore Govt. Central Press, Bangalore.—1896.